ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:11/04/2008 ರ ನಡವಳಿಗಳು

**ವಿಷಯ ಸಂಖ್ಯೆ:22/2008–09**

ಕಾರ್ಡ್ ರಸ್ತೆಯ ಬಿ.ಡಬ್ಲ್ಯು.ಎಸ್.ಎಸ್.ಬಿ ಕಛೇರಿಯಿಂದ ಮನುವನದ ವರೆಗಿನ ಸಿವಿಲ್ ಮತ್ತು ಡಾಂಬರೀಕರಣ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆರ್ಟೀರಿಯಲ್ ಮತ್ತು ಸಬ್ – ಆರ್ಟೀರಿಯಲ್ ರಸ್ತೆಗಳ ಅಭಿವೃದ್ಧಿ ಹಾಗೂ ಪುನಶ್ಚೇತನಗೊಳಿಸುವ ಕಾಮಗಾರಿಯ ಅಂದಾಜು ಮೊತ್ತ ರೂ.99.35 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ:522/2007–08, ದಿನಾಂಕ:07/03/2008 ರಲ್ಲಿ ನೀಡಿರುತ್ತಾರೆ. ಸದರಿ ಕಾಮಗಾರಿಗೆ ರೂ.96.40 ಲಕ್ಷಗಳಿಗೆ ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಗೆ ದಿನಾಂಕ:20/03/08 ರಂದು ಪೂರ್ಣಗೊಂಡ ಟೆಂಡರ್ ದಾಖಲೆಗಳನ್ನು ಸ್ವೀಕರಿಸಲಾಗಿ, ದಿನಾಂಕ: 24/03/08 ರಂದು ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗಿರುತ್ತದೆ. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಇಬ್ಬರು ಗುತ್ತಿಗೆದಾರರು ಟೆಂಡರ್ ದಾಖಲೆಗಳನ್ನು ಸಲ್ಲಿಸಿದ್ದು, ಸದರಿಯವರ ತಾಂತ್ರಿಕ ಬಿಡ್‌ಗಳ ಮೌಲ್ಯಮಾಪನದಲ್ಲಿ ಶ್ರೀ ಬಿ.ಕೆ. ವಿನೋದ್‌ಕುಮಾರ್ ಮತ್ತು ಶ್ರೀ. ಎಮ್.ಶಿವಶಂಕರ್ ಅರ್ಹರಾದ ಇಬ್ಬರು ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ದಿನಾಂಕ: 29/03/08 ರಂದು ತೆರೆಯಲಾಗಿರುತ್ತದೆ. ಇಬ್ಬರು ಗುತ್ತಿಗೆದಾರರು ನಮೂದಿಸಿರುವ ದರಗಳು ಕೆಳಕಂಡಂತಿದೆ.

(1) ಶ್ರೀ ಬಿ.ಕೆ. ವಿನೋದ್‌ಕುಮಾರ್ ರವರು ಒಟ್ಟು ರೂ.1,50,71,550.00 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ ಶೇ 56.31ರಷ್ಟು ಹೆಚ್ಚಾಗಿದ್ದು ಹಾಗೂ 2007–08 ನೇ ಸಾಲಿನ ದರ ಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.30.88 ರಷ್ಟು ಹೆಚ್ಚಾಗಿರುತ್ತದೆ.
(2) ಶ್ರೀ ಎಮ್.ಶಿವಶಂಕರ್ ರವರು ಒಟ್ಟು ರೂ.1,55,80,348.00 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ ಶೇ.61.59 ರಷ್ಟು ಹೆಚ್ಚಾಗಿದ್ದು ಹಾಗೂ 2007–08 ನೇ ಸಾಲಿನ ದರ ಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.35.30 ರಷ್ಟು ಹೆಚ್ಚಾಗಿರುತ್ತದೆ.

ಸದರಿ ಕಾಮಗಾರಿಗೆ ಶ್ರೀ ಬಿ.ಕೆ. ವಿನೋದ್‌ಕುಮಾರ್ ರವರು ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, 2007–08 ನೇ ಸಾಲಿನ ದರ ಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.30.88 ರಷ್ಟು ಹೆಚ್ಚಿನ ದರವನ್ನು ನಮೂದಿಸಿದುದ್ದರಿಂದ, ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿದ್ದು, ಸದರಿ ಗುತ್ತಿಗೆದಾರರು ನಮೂದಿಸಿರುವ ದರ ಶೇ.30.88 ಗಳನ್ನು ಶೇ. 14.95 ಗೆ ಇಳಿಸಿ ಸಂಧಾನ ಪತ್ರವನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಗುತ್ತಿಗೆದಾರರಾದ ಶ್ರೀ ಬಿ.ಕೆ. ವಿನೋದ್‌ಕುಮಾರ್ ರವರ ಗುತ್ತಿಗೆಯ ಮೊತ್ತ ರೂ.1,32,36,900–00 ಗಳಾಗಿದ್ದು, ಇದನ್ನು 2007–08ರ ಸಾಲಿನ ದರ ಸೂಚಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳ ಮೊತ್ತ ರೂ.1,15,15,387.00 ಗಳಿಗೆ ಹೋಲಿಸಿದಾಗ ಶೇ.14.95% ರಷ್ಟು ಹೆಚ್ಚಿರುವ ಈ ಟೆಂಡರ್‌ನ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:08/04/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:08/04/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:11/04/2008 ರ ನಡವಳಿಗಳು**

**ವಿಷಯದ ಸಂಖ್ಯೆ:23/08-09**

ಬೊಮ್ಮನಹಳ್ಳಿ ವಲಯದ ಹೆಚ್ಚುವರಿ ಅನುದಾನದಡಿ ಕೈಗೊಳ್ಳುತ್ತಿರುವ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಕೋರಿ.

**ಪ್ರಸ್ತಾವನೆ:**

ಬೊಮ್ಮನಹಳ್ಳಿ ವಲಯದ ಹೆಚ್ಚುವರಿ ಅನುದಾನದಡಿ ಕೈಗೊಳ್ಳುತ್ತಿರುವ ಕಾಮಗಾರಿಯು ಈಗಾಗಲೇ ಮಂಜೂರು ಮಾಡಿದ ಕಡತದ ಸಂಖ್ಯೆ ಇ.ಇ.(ಬಿ.ಹೆಚ್)/ಪಿ.ಆರ್/81/2007-08 ದಿನಾಂಕ:09/01/2008 ರಲ್ಲಿನ ಮುಖ್ಯ ಲೆಕ್ಕಾಧಿಕಾರಿವರ ಅಭಿಪ್ರಾಯದಲ್ಲಿ ಅನುಮೋದನೆಯಾಗಿದ್ದು, ಈ ಕಾಮಗಾರಿ ವಿವರ ಕೆಳಕಂಡಂತಿದೆ.

| ಕ್ರ.ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | Asphalting Road Construction of drains and Development of foothpath from Hosur Road junction to oni road on Begur main Road (0.00 M to 500.00 M) in Bommanahalli Sub Division | 98.00 |

ಈ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಅಧಿಕಾರ ವಲಯ ವ್ಯಾಪ್ತಿಯಲ್ಲಿ ಮೀರಿದ್ದು, ಈ ಅಧಿಕಾರವು ಮಾನ್ಯ ಆಡಳಿತಗಾರರ ವ್ಯಾಪ್ತಿಯಲ್ಲಿರುವ ಹಿನ್ನಲೆಯಲ್ಲಿ ಮೇಲ್ಕಂಡ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:08/04/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:08/04/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು